International Journal of Kannada Research
www.kannadajournal.com

ISSN: 2454–5813
IJSR 2017; 3(2): 77-80
© 2017 IJKS
www.kannadajournal.com
Received: 15-02-2017
Accepted: 16-03-2017

**ಅರುಣ್ ಎಸ್,ಪಿ.**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಬೀರೂರು

Correspondence
**ಅರುಣ್ ಎಸ್,ಪಿ.**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಬೀರೂರು

# ಚಂದ್ರಶೇಖರ ಕಂಬಾರರ ಶಿವನ ಡಂಗುರ: ಪರಂಪರೆ ಮತ್ತು ಜನಪದ ಬದುಕು

**ಅರುಣ್ ಎಸ್,ಪಿ.**

ಕಂಬಾರರು ಜಾನಪದ ರಂಗದ ಮೋಡಿಗಾರ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ. ಪರಂಪರೆ ಮತ್ತು ಜನಪದ ಬದುಕನ್ನು ಕಂಬಾರರು ತನ್ನ ಕಾದಂಬರಿಯಲ್ಲಿ ಆಸುಹೊಕ್ಕಾಗಿ ತಂದಿದ್ದಾರೆ.ಕಂಬಾರರು ಸಂಪ್ರದಾಯವನ್ನು ವಿರೋಧಿಸುತ್ತಾರೆ. ಆದರೆ ಅವರು ಪರಂಪರೆಯನ್ನು ಪ್ರೋತ್ಸಾಹಿಸುತ್ತಾರೆ. ಮತ್ತು ಉಳಿಸಿ ಬೆಳೆಸುವ ಪ್ರಯತ್ನ ಮಾಡಿಕೊಂಡೆ ಬಂದಿದ್ದಾರೆ. ಕಂಬಾರರಲ್ಲಿ ಬರವಣಿಗೆಯೆಂಬುವುದು ಕೇವಲ ಅಭಿವ್ಯಕ್ತಿಯಲ್ಲ. ಅದೊಂದು ಸಾಂಸ್ಕೃತಿಕ ಅಗತ್ಯ. ಮನಸ್ಸಿನ ಸಮ ತೂಕವನ್ನು ಕಾಯ್ದುಕೊಳ್ಳಲು ನಡೆಸುವ ಹೋರಾಟ. ಜನಪದ ಸಂಸ್ಕೃತಿಯಲ್ಲಿ ಬೆರೆತಿರುವ ಜೀವನ ಮೌಲ್ಯ ನಂಬಿಕೆ ನಡವಳಿಕೆಗಳನ್ನು ಕಂಬಾರರು ಹೆಚ್ಚು ಆಸ್ಥೆಯಿಂದ ಇದಿರುಗೊಂಡವರು. ಹೀಗಾಗಿ ರೂಢಿಗತ ಬರಹ ಚಿಂತನೆಗಳಿಗಿಂತ ಬಹಳ ಭಿನ್ನವಾಗಿ ಕಂಬಾರರು ಸಮಕಾಲೀನ ಸಮಸ್ಯೆಗಳಿಗೆ ಮುಖಾಮುಖಿಯಾದರು. ಸಾಮಾಜಿಕ ನ್ಯಾಯದ ನೆಲೆಗಳಲ್ಲಿ ಮೀರಿದ ಸಾಂಸ್ಕೃತಿಕ ನ್ಯಾಯದ ಪರಿಕಲ್ಪನೆಗಳನ್ನು ಅವರು ತಮ್ಮ ಕಾದಂಬರಿಗಳಲ್ಲಿ ತರುತ್ತಾರೆ. ಕನ್ನಡದ ಬಹುಮಂದಿ ಬರಹಗಾರರು ಗ್ರಾಮೀಣ ಬದುಕು ಹಾಗೂ ಅದರ ವಾಸ್ತವಗಳನ್ನು ಸ್ಥಗೀತ ರೂಪಿಯಾಗಿ ಪರಿಭಾವಿಸಿ ಬರೆದರೆ ಅವರು ಅದನ್ನು ಕ್ರೀಯಾಶಿಲವಾಗಿ ಕಟ್ಟಿಕೊಳ್ಳುತ್ತಾರೆ. ಐರೋಪ್ಯರ ಬೌದ್ಧಿಕ ಚೌಕಟ್ಟು ಹಾಗೂ ವಿದ್ವತ್ ಪರಂಪರೆಯನ್ನು ನಿರಾಕರಿಸಿ ಕನ್ನಡದ್ದೇ ಆದ ಒಂದು ಸೃಜನಶೀಲವಾದ ಹಾಗೂ ಸಮಗ್ರವಾದ ನೋಟವನ್ನು ಕಟ್ಟಿಕೊಳ್ಳುತ್ತಾರೆ

ಭಾರತೀಯ ಗ್ರಾಮ ಬದುಕು ಹಾಗೂ ಸಾಮಾಜಿಕ ವಾಸ್ತವಗಳನ್ನು ಸ್ಥಗೀತ ರೂಪಿಯಾಗಿ ಪರಿಭಾವಿಸಿದರೆ ಕಂಬಾರರು ಅದನ್ನು ಸೃಜನಶೀಲವಾಗಿ ಅದನ್ನು ಕಟ್ಟಿಕೊಡುತ್ತಾರೆ. ಅವರುತರುವ ಪ್ರತಿಯೊಂದು ಪಾತ್ರ ಹಾಗೂ ಕಥನ ಕ್ರಿಯೆಗಳು ಸಾಂಸ್ಕೃತಿಕ ಸಂಘರ್ಷ ಹಾಗೂ ಅನುಸಂಧಾನ ಭಾಗಗಳಾಗಿ ಬರುತ್ತದೆ. ಕಂಬಾರರು ಪಾಶ್ಚಾತ್ಯ ಬೌದ್ಧಿಕ ಚೌಕಟ್ಟು ಹಾಗೂ ವಿದ್ವತ್ ಪರಂಪರೆಯನ್ನು ನಿರಾಕರಿಸಿ ಸ್ಥಳೀಯತೆಯೊಂದಿಗೆ ಕ್ರಿಯಾತ್ಮಕ ಸಂವಾದವನ್ನು ಮಾಡುತ್ತಾರೆ, ಆ ಮೂಲಕ ಒಂದು ಸಮಗ್ರ ಸಾಂಸ್ಕೃತಿಕ ನೋಟವನ್ನು ಕಟ್ಟಿಕೊಡುತ್ತಾರೆ. ಒಂದು ಭಾಷೆ ಹಾಗೂ ಸಂಸ್ಕೃತಿಯ ಅತ್ಯಂತ ಸಂವೇಧನಶೀಲ ಅಂಗವೆಂದರೆ ಅದರ ಪುರಾಣ ಕಲ್ಪನೆ ಹಾಗೂ ರೂಪಕ ಶಕ್ತಿ ನನ್ನ ಕಾವ್ಯ ನಾಟಕಗಳು ನಮ್ಮ ಪರಂಪರೆಯ ಪುರಾಣ ಸೃಷ್ಟಿಯ ಭಾಷೆಯ ಮೂಲಕ ಸಮುದಾಯಗಳ ವಿಘಟನೆಯನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತದೆ. ಬಹುತೇಕ ನವ್ಯ ಬರಹಗಾರರು ಏಕ ಪರಿಣಾಮತ್ಮಕವಾಗಿ ಪುರಾಣಗಳನ್ನು ಒಡೆಯಲು ಪ್ರಯತ್ನಿಸಿದರೆ ನಾನು ಪುರಾಣದ ಭಾಷೆಯಲ್ಲಿ ರೇಖಾತ್ಮಕ ಕಥೆಯನ್ನು ಅಡಕಗೊಳಿಸಲು ಪ್ರಯತ್ನಿಸುತ್ತೇನೆ ಎನ್ನುವ ಕಂಬಾರರ ಮಾತುಗಳ ಅವರ ಬರಹದ ಭೂಮಿಕೆಯನ್ನು ಮನಗಾಣಿಸುತ್ತೇವೆ. ಪುರಾಣಿಕರ ಪ್ರಕ್ರಿಯೆ ಸಮುದಾಯಿಕ ಪ್ರಜ್ಞೆಯನ್ನು ಪಡೆದಾಗ ಪುರಾಣ ಮತ್ತು ಅದರ ಪಾತ್ರಗಳು ಹೇಗೆ ಜನಹಿತ ಬಯಸುತ್ತವೆ ಎನ್ನುವ ಸಮಕಾಲೀನ ತತ್ವವನ್ನು ಕಂಬಾರರು ಕಟ್ಟಿಕೊಟ್ಟರು. ಶ್ರಮವರ್ಗಗಳ ಸಾಂಸ್ಕೃತಿಕ ಚರಿತ್ರೆಯು ಆಯಾ ಸಮುದಾಯಗಳು ರೂಢಿಸಿಕೊಂಡು ಬಂದಿರುವ ಪುರಾಣ, ಕಥೆ, ಆಚರಣೆ, ನಂಬಿಕೆಗಳಲ್ಲಿ ಅಡಗಿರುತ್ತವೆ ಎನ್ನುವುದನ್ನು ಸ್ವತಃ ಕಂಬಾರರು ಅರಿತಿದ್ದಾರೆ. ಅವರೇ ಹೇಳುವಂತೆ ನಾನು ಕನ್ನಡ ಕಾವ್ಯ ಪರಂಪರೆಗೆ ಸೇರಿದ ಒಬ್ಬ ಕವಿ, ನನಗೆ ಜನಪದ ಕಾವ್ಯವೇ ಒಂದು ಭಾಷೆ ಈ ಭಾಷೆಯ ಮೂಲಕ ಜಗತ್ತನ್ನು ಪಡೆಯಲು ಯತ್ನಿಸಿದವನು.

ನನ್ನ ವೈಯಕ್ತಿಕ ಭಾಷೆ ಈ ಜಗತ್ತಿನ ಅದರ ಇತಿಹಾಸದ ವಿರಾಟತೆಯನ್ನು ಅಭಿವ್ಯಕ್ತಿಸುವುದು ಸಾಧ್ಯವಿಲ್ಲ. ಕನ್ನಡ ಜನಪದ ಕಾವ್ಯ ನನಗೆ ಕೇವಲ ಪಡೆನುಡಿಯನ್ನು ಅಷ್ಟೇ ಅಲ್ಲ ಪ್ರತಿಮೆ ರೂಪಕಗಳನ್ನು ಕೊಟ್ಟಿದೆ, ಕಥೆಗಳನ್ನು ಕೊಟ್ಟಿಗೆ ಅಭಿಜಾತ ಸಾಹಿತ್ಯಕ್ಕೆ ತೀರ ಭಿನ್ನವಾದ ಸಾಹಿತ್ಯವನ್ನು ನಿರ್ಮಿಸುವುದು ನನಗೆ ಅರಿವಿಲ್ಲದಂತೆ ನನ್ನ ಧ್ಯೇಯವಾಗಿತ್ತು, ನನ್ನ ಸಂವೇದನೆ ರೂಪಗೊಂಡಿದ್ದೇ ಜನಪದ ಜಗತ್ತಿನ ಸುಖ

ದುಃಖಗಳಿಂದ ಎನ್ನುವ ಕಂಬಾರರ ಅಲುಗಾಡದ ಬದ್ದತೆಯೇ ಅವರ ಕನ್ನಡದ ಚಿಂತನೆಗಳನ್ನು ವಿಶಿಷ್ಟಗೊಳಿಸಿದವು ಹಾಗೂ ಭಿನ್ನಗೊಳಿಸಿದವು.

ಡಿ. ಆರ್ ನಾಗರಾಜು ಅವರು ಗುರುತಿಸಿರುವಂತೆ ಒಂದೆಡೆ ನಾವು ನಮ್ಮ ಸ್ವಂತ ಭಾಷೆಗಳ ಮೂಲಕವಾಗಿಯೇ ನಮ್ಮ ಪರಂಪರೆಗಳನ್ನು ಜೀವನ ದರ್ಶನಗಳನ್ನು ಪಡೆದುಕೊಳ್ಳುತ್ತಾ ಬರುತ್ತೇವೆ. ಇನ್ನೊಂದೆಡೆ ಅವೇ ಪರಂಪರೆ ದರ್ಶನಗಳ ಬಗ್ಗೆ ಮಾತಾಡುವಾಗ ಅವುಗಳನ್ನು ಸಮರ್ಥಿಸಿಕೊಳ್ಳುವಾಗ ಅವುಗಳ ಭಾಷೆಯನ್ನು ಬಿಟ್ಟು ಅನ್ಯ ಭಾಷೆಯೊಂದನ್ನು ಬಳಸಬೇಕಾದಂತಹ ವಿಲಕ್ಷಣ ಅಸಹಾಯಕತೆಯಲ್ಲಿ ಸಿಲುಕಿದ್ದೇವೆ, ಒಂದು ಪರಂಪರೆಯನ್ನು ಸಮರ್ಥಿಸಲು ಅದಕ್ಕೆ ಪರಕೀಯವಾದುದೊಂದು ಭಾಷೆಯನ್ನು ಬಳಸುದರಲ್ಲಿಯೇ ನಾವು ಆ ಪರಂಪರೆಯ ವಿರುದ್ದ ಸೂಕ್ಷ್ಮ ಹಿಂಸಾ ಕೃತ್ಯವೊಂದನ್ನು ಎಸಗುತ್ತಿರುತ್ತೇವೆ. ಅಂದರೆ ದೇಸಿಯ ಜ್ಞಾನ ಪರಂಪರೆಗಳ ಬಗ್ಗೆ ಮಾತಾಡಲು ಆಧುನಿಕ ಭಾಷೆಯೊಂದನ್ನು ಬಳಸುವುದು ಯಾವ ರೀತಿಯಿಂದಲೂ ಯೋಗ್ಯವಲ್ಲ ಎನ್ನುವ ಮಾತು ಇಲ್ಲಿ ನನಗೆ ತುಂಬಾ ಪ್ರಸ್ತುತ ಎನಿಸುತ್ತದೆ. ಹೀಗೆಂದ ಮಾತ್ರಕ್ಕೆ ನಮ್ಮ ಸಂಸ್ಕೃತಿಯೇ ಶ್ರೇಷ್ಠ ಎಂಬ ಆದರ್ಶಿಕೃತ ಭ್ರಮೆಯಾಗಲೀ ಆಧುನಿಕತೆಯನ್ನು ವಿರೋಧಿಸಬೇಕು ಎನ್ನುವ ಸರಳಾರ್ಥಕ್ಕೆ ಬರಲಾಗದು. ದೇಶಿಯ ಸಂಸ್ಕೃತಿಯಲ್ಲಿ ಅರ್ಥೈಸುವ ಸಮರ್ಥ ಭಾಷೆ ಪರಿಕರಗಳು ನಮ್ಮಲ್ಲಿವೆ. ಅವು ಸಾಧಿಸುವ ಸಮರ್ಥ ಯಾಂತ್ರಿಕೃತ ವಸಹತು ಪರಿಭಾಷೆಗೆ ಸಾಧ್ಯವಾದದು. ದೇಶಿಯ ಗಡಸುತನವನ್ನು ಇದರಿಂದ ಹಿಡಿಯಲಾಗುವುದಿಲ್ಲ. ಆದರೆ ಈ ವಸಹತುವಿನ ಪ್ರಭಾವಲಯಕ್ಕೆ ಸಿಕ್ಕಿ ಬಿದ್ದಿ ಸಮಾಜದ ಯಾವ ಪ್ರಜ್ಞಾವಂತನೂ ಈ ಸಮಸ್ಯೆಯಿಂದ ಹೊರತಾಗಿರಲಾರ ಎನ್ನುವ ಕಟು ಸತ್ಯವೂ ನಮ್ಮ ಮುಂದಿದೆ. ಹೀಗಾಗಿ ಶುದ್ದ ಎನ್ನುವ ಭಾಷಾ ಪರಿಕರಗಳಿಂದ ತಿಳುವಳಿಕೆಯ ಮಾದರಿಗಳಿಂದ ಬರೆಯಲು ಸಾಧ್ಯವಾಗಲಾರದು. ಆದರೂ ಇರುವ ಸಾಧ್ಯತೆಗಳನ್ನು ಈ ಪರಂಪರೆಗೆ ಹೂನವಾಗದಂತೆ ಆಧುನಿಕ ಪರಿಕರಗಳಿಗೆ ಒಗ್ಗಿಸಿಕೊಂಡು ಅದಕ್ಕೊಂದು ಹೊಸ ಚಾಲನೆಯನ್ನು ಕೊಡುವ ಸವಾಲು ನಮ್ಮ ಮುಂದೆ ಇದೆ. ಕಂಬಾರರ ಬರಹದ ಬಹುಮುಖ್ಯ ಕಾಳಜಿ ಈ ದೇಶಿಯತೆಯನ್ನು ಹುಡುಕುವ ಮತ್ತು ಸಶಕ್ತವಾಗಿ ಕಟ್ಟಿಕೊಳ್ಳುವುದರಲ್ಲಿ ಎದ್ದು ಕಾಣುತ್ತದೆ.

ಪರಂಪರೆಯನ್ನು ಪುನರ್ ರೂಪಿಸುವ ಮೂಲಕ ಬಹುರೂಪಿ ಚರಿತ್ರೆಯನ್ನು ಜೀವಂತವಾಗಿಸುವ ಕಂಬಾರರ ಚಿಂತನ ಕ್ರಮ ತುಂಬಾ ಸೂಕ್ಷ್ಮವಾದುದು. ಕಂಬಾರರು ಶಿವನ ಡಂಗುರ ಕಾದಂಬರಿಯಲ್ಲಿ ಶಿವಪುರದಲ್ಲಿ ಹಿಂದೆ ಇದ್ದ ಪರಂಪರೆ ಈಗ ಕಾಣುತ್ತಿಲ್ಲ ಅಂತಹ ಪರಂಪರೆ ಮತ್ತೆ ಬರಬೇಕು ಎನ್ನುತ್ತಾರೆ ಅಂದರೆ ಈಡೀ ಸಮಾಜದಲ್ಲಿ ಭಾರತೀಯ ಪರಂಪರೆ ಎನ್ನುವುದು ನಾಶವನ್ನು ಹೊಂದುವ ಸ್ಥಿತಿಗೆ ಬರುತ್ತದೆ. ಭಾರತದಲ್ಲಿ ಇದ್ದ ಜನಪದರ ಸೊಗಡು, ಸಂಸ್ಕೃತಿ ಇಂದು ಪ್ರಸ್ತುತ ಸಮಾಜದಲ್ಲಿ ಕಾಣುತ್ತಿಲ್ಲ. ಎಲ್ಲಾ ನಗರದವರ ಪ್ರಭಾವದಿಂದ ಜಾಗತೀಕರಣದಿಂದ ಅನ್ಯ ಸಂಸ್ಕೃತಿಕ ಆಕ್ರಮಣದಿಂದ ಅಳಿವಿನ ಅಂಚಿಗೆ ತಲುಪುತ್ತಿದೆ ಇದನ್ನು ಕಾಪಾಡಿಕೊಳ್ಳುವ ರಕ್ಷಿಸುವ ಹೊಣೆ ನಮ್ಮ ಮೇಲಿದೆ ಇಂದು ನಾವು ಮೈಮರೆತು ಕೈಚೆಲ್ಲ ಕೂತರೆ ಮುಂದೆ ಬರುವ ಪೀಳಿಗೆಗೆ ನಮ್ಮ ಭಾರತೀಯ ಪರಂಪರೆ ಮತ್ತು ಸಂಸ್ಕೃತಿಗಳನ್ನು ಪುಸ್ತಕಗಳಲ್ಲಿ ಓದಿ ಹೇಳಬೇಕಾಗುತ್ತದೆ. ಅಥವಾ ತೋರಿಸಬೇಕಾಗುತ್ತದೆ ಎಂದರೂ ತಪ್ಪಿಲ್ಲ. ಇಂತಹ ಸಂದಿಗ್ದ ಪರಿಸ್ಥಿತಿಯಲ್ಲಿ ನಾವು ಅಂದರೆ ಭಾರತೀಯರು ನಿಂತಿದ್ದೇವೆ ಎಂದೇ ಹೇಳಬಹುದು. ಕಂಬಾರರು ಜನಪದವನ್ನು ಈ ಕಾದಂಬರಿಯಲ್ಲಿ ಆಸುಹೊಕ್ಕಾಗಿ ಬಳಸುವ ಮೂಲಕ ಕಂಬಾರರು ಜನಪದ ರಂಗದ ಮೋಡಿಗಾರ ಎಂಬುವುದನ್ನು ಮತ್ತೊಮ್ಮೆ ಸಾಭೀತು ಮಾಡಿದ್ದಾರೆ.

ಕಂಬಾರರು ಹಿಂದೆ ಮದುವೆಗಳು ನಡೆಯುತ್ತಿದ್ದ ರೀತಿಯನ್ನು ಹೇಳಿದ್ದಾರೆ. ಮದುವೆಗೆ ಒಂದು ದಿನ ಗಂಡನ ಮನೆಯಿಂದ ಗಂಡನ್ನು ಕರೆದುಕೊಂಡು ದಿಬ್ಬಣ ಬರುವುದನ್ನು ಇಲ್ಲಿ ಹೀಗೆ ವಿವರಿಸಿದ್ದಾರೆ. ದಿಬ್ಬಣವನ್ನು ವೈಭವದ ಮೆರವಣಿಗೆಯಲ್ಲಿ ಕರೆದೊಯ್ಯುವುದು ರೂಢಿ ಅಷ್ಟರಲ್ಲಿ ಶಿವಪುರದ ಬೀಗರಿಗೆ ಒಂದು ಭಯಾನಕ ಸುದ್ದಿ ತಲುಪಿತು. ಮದುವೆಯಲ್ಲಿ ಬೀಗರು ಬೀಗರಿಗೆ ಅವರು ಇವರಿಗೆ ಇವರು ಅವರಿಗೆ ಚೇಷ್ಟೆ ಮಾಡುವುದು ಇದ್ದೇ ಇರುತ್ತದೆ. ಪರಸ್ಪರ ಬಣ್ಣ ಎರಚುವುದು ಬೆಲ್ಲದ ಬದಲು ಹುಗ್ಗಿಗೆ ಖಾರ ಹಾಕುವುದು ಚೇಷ್ಟೆಯ ಮಾತಾಡುವುದು ಇತ್ಯಾದಿ ಇವೆಲ್ಲಾ ಮದುವೆ ಕಾಲದ ಸರ್ವೆ ಸಾಮಾನ್ಯ ಮೋಜುಗಳು. ದಿಬ್ಬಣ ಬಂದ ಸಾಯಂಕಲ ಹೊಸ ಗಂಡ ಹೆಂಡತಿ ಪರಸ್ಪರ ಹೆಸರು ಹೇಳುವುದು ಕೆನ್ನೆಗಳಿಗೆ ಹರಿಸಿಣ ಹಚ್ಚುವುದು ಆ ನೆಪದಲ್ಲಿ ನೆರದ ಹುಡುಗ ಹುಡುಗಿಯರು ತಮ್ಮ ತಮ್ಮ ಒರಗೆಯವರಿಗೆ ಹರಿಶಿಣ ಹಚ್ಚಿ ಕೊಂಚ ಕಾಮ ಕೊಂಚ ಪ್ರೀತಿ ಕೊಂಚ ಕನಸು ಕೊಂಚ ಕಲ್ಪನೆ ಅಂತೂ ಯಾವದೂ ಅತೀಯಾಗದಂತೆ ಗಾಯದ ಸೊಕ್ಕನ್ನು ಅನುಭವಿಸುವ ಅವಕಾಶ ಪಡೆದದ್ದು,ಹೀಗೆ ಮದುವೆ ಮುಂಜಿಗಳಲ್ಲಿ ಜನಪದರ ಕಲೆಯೇ ಅಡಕವಾಗಿತ್ತು ಜನಪದರ ಮದುವೆ ಕಾರ್ಯಗಳು ಒಂದು ವಾರ ಮುಂಚಿತವಾಗಿ ಆರಂಭವಾದವು. ಮುಗಿಯುತ್ತಿದ್ದದ್ದು, ಒಂದು ವಾರದ ನಂತರವೇ ಆಗಿತ್ತು. ,ಮನೆಯ ತುಂಬಾ ನೆಂಟರಿಷ್ಟರ ಚಿಕ್ಕ ಚಿಕ್ಕ ಮಕ್ಕಳ ಸಡಗರವೋ ಸಡಗರವೋ ಇರುತ್ತಿತ್ತು. ಆದರೆ ಪ್ರಸ್ತುತದಲ್ಲಿ ನಡೆಯುವ ವಿವಾಹಗಳು ತುಂಬಾ ಬದಲಾಗಿವೇ, ತುಂಬಾ ಸರಳವಾಗಿದೆ, ಜನಪದರಲ್ಲಿ ನಡೆಯುತ್ತಿದ್ದ ವಿವಾಹಗಳ ರೀತಿ ಅವರು ಅನುಸರಿಸುತ್ತಿದ್ದ ಕ್ರಮ ಈಗೀನವರಿಗೆ ಗೊತ್ತೇ ಇಲ್ಲ. ಇಂದು ವಿವಾಹಗಳು ಒಂದು ದಿನ ಇಲ್ಲಾ ಅರ್ಧದಿನಗಳಲ್ಲಿ ಮುಗಿದುಹೋಗುತ್ತದೆ. ಯಾವುದೇ ಮೋಜಿಗಾಗಿ ಆಡುವ ಮದುವೆಯಾಟಗಳು ಮಾತುಕಥೆಗಳು ಯಾವುವು ಇರುವುದಿಲ್ಲ.

ಆನಪದರಲ್ಲಿ ಇದ್ದ ಆಥಿತಿ ದೇವೋ ಭವ' ಎಂಬ ನಂಬಿಕೆ ಇಂದು ಬದಲಾಗಿದೆ. ಮನೆಗೆ ಬಂದ ಅಥಿತಿಗಳನ್ನು ದೇವರು ಎಂದು ನಂಬಿದ್ದರು. ಅವರಿಗೆ ಯಾವುದೇ ಕೊರತೆಗಳಾಗದಂತೆ ಊಟ ಉಪಚಾರಗಳನ್ನು ಮಾಡುತ್ತಿದ್ದರು ಜನಪದರು, ಆದರೆ ಇಂದು ಮನೆಯ ಬಾಗಿಲಿಗೆ ಬಂದ ಅತಿಥಿ ನೆಂಟರನ್ನು ಮನೆಯ ಒಳಗಡೆ ಕರೆದು ಒಂದು ಲೋಟ ನೀರನ್ನು ಕೋಡುವ ಸೌಜನ್ಯತೆಯನ್ನು ಕೂಡಾ ನಮ್ಮ ಜನ ಕಳೆದುಕೊಂಡಿದ್ದಾರೆ ಎನ್ನಬಹುದು. ಶಿವಪುರ ಒಂದು ಜನಪದರ ಸೊಗಡನ್ನು ಹೊಂದಿರುವಂತಹ ಒಂದು ಪುಟ್ಟ ಹಳ್ಳಿ ಎಂದು ಹೇಳುತ್ತಾರೆ. ಕಂಬಾರರು ಜನಪದರ ಬದುಕು ಅಬವರು ಬದುಕುತ್ತಿರುವ ಸಮಾಜ ವಾತವಾರಣ ಅವರು ಕಟ್ಟಿಕೊಂಡಿದ್ದ ಮನೆಗಳು ಬಳಸುತ್ತಿದ್ದ ಆಹಾರ ಧಾನ್ಯಗಳು ಜನಪದರ ಆಹಾರ ಪದ್ದತಿ ಎಲ್ಲವನ್ನೂ ಕಾದಂಬರಿಯಲ್ಲಿ ಹೇಳಿದ್ದಾರೆ. ಶಿವಪುರದಲ್ಲಿನ ಮನೆಗಳು ಕಂಬಾರರೇ ಹೇಳುವಂತೆ ಮಣ್ಣಿನ ಗೋಡೆ ಆ ಗೋಡೆ ನೆನೆಯದ ಹಾಗೇ ನೆತ್ತಿಯ ಮ್ಯಾಲಿನಿಂದ ಇಳಿಜಾರಾಗಿ ಕೆಳಗೆ ಬಾಗಿದ ಪರಿ ಹೆಂಚು ಅಥವಾ ಹುಲ್ಲಿನ ಮೇಲ್ಹಾವಣಿಗಳಿವೆ. ಕೆಂಪು ಮಣ್ಣನ್ನು ನೀರಿನಲ್ಲಿ ಕಲಿಸಿ ಮನೆಮುಂದಿನ ಗೋಡೆಗೆ ಹಚ್ಚಿ ಸುಣ್ಣದಲ್ಲಿ ಚಿತ್ತಾರಗಳನ್ನು ಬರೆದಿರುತ್ತಾರೆ ಮನೆಗಳ ಬಾಗಿಲು ಕಿಟಕಿಗಳು ಕೂಡ ಚಿತ್ತಾರದ ಮರ ಬಳ್ಳಿ ಪ್ರಾಣಿ ಪಕ್ಷಿಗಳಿಂದ ಶೃಂಗಾರಗೊಂಡಿರುವುದು ಶಿವಪುರ ಮನೆಗಳ ವಿಶೇಷ. ಬಲಗಡೆ ವಿಶಾಲವಾದ ಜಾಗದಲ್ಲಿ ದೊಡ್ಡ ಹಾಗೂ ಅಂತಸ್ಥಿನ ಕೆಂಪು ಹಂಚಿನ ವಾಡೆಯಿದೆ. ಈ ಭಾಗದಲ್ಲಿ ಪ್ರಸಿದ್ದವಾದ ಬಹುದೊಡ್ಡ ವಾಡೆ ಇದು. ಇದರ ಬಲಕ್ಕೆ ತುಸು ದೂರ ನಾಲ್ಕು ಮನೆ ದಾಟಿ ಚಾವಡಿ ಇದೆ. ಇದು ಜನಪದರ ಮನೆಗಳ ರಚನಾ ವಿನ್ಯಾಸವಾಗಿದೆ, ಹೀಗೆ ಕಂಬಾರರು ಚಕೋರಿ

ಕಾದಂಬರಿಯಲ್ಲಿಯೂ ಸಹ ಇಂತಹ ಅನೇಕ ಜನಪದೀಯ ಅಂಶಗಳನ್ನು ತಂದಿದ್ದಾರೆ ಜನಪದರು ಆಹಾರವಾಗಿ ರಾಗಿ, ಬರಗ, ಸಜ್ಜೆ, ನವಣೆ, ಇತ್ಯಾದಿಗಳನ್ನು ಬಳಸುತ್ತಿದ್ದರು ಒಂದೊಂದು ಕಾಲದಲ್ಲಿ ಒಂದೊಂದು ರೀತಿಯ ಆಹಾರವನ್ನು ಅಂದರೆ ಧಾನ್ಯ ಕಾಳುಗಳನ್ನು ತಿನ್ನುತ್ತಿದ್ದರು ಎನ್ನುವುದು ಈ ಕಾದಂಬರಿಯಲ್ಲಿ ತಿಳಿದುಬರುತ್ತದೆ. ಇಂತಹ ಆರೋಗ್ಯಕರವಾದ ಪರಿಸರ ಆಹಾರ ಪದ್ಧತಿಯನ್ನು ಜನಪದರು ಹೊಂದಿದ್ದರಿಂದ ಅವರು ಆರೋಗ್ಯವಂತರಾಗಿದ್ದರು. ಯಾವುದೇ ವಿಚಿತ್ರ ಕಾಯಿಲೆಗಳು ರೋಗಗಳಿಂದ ದೂರವಿದ್ದರು. ತಮ್ಮ ವೈದ್ಯರ ಹತ್ತಿರ ಹೋಗುವವರ ಸಂಖ್ಯೆಯು ವಿರಳವಾಗಿತ್ತು. ಮತ್ತು ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುತ್ತಿದ್ರು ಯಾವುದೇ ಯಂತ್ರಗಳು ಇರಲಿಲ್ಲ. ಗಟ್ಟುಮುಟಾಗಿದ್ದರೂ ಎಂದೇ ಹೇಳಬಹುದು. ಅವರು ಬದುಕು ಎನ್ನುವುದು ತುಂಬಾ ಹಸನಾಗಿತ್ತು ಸ್ವಾರ್ಥ, ಅಸೂಯೆ, ದ್ವೇಶಗಳ ಭಾವನೆ ಅವರಲ್ಲಿ ಅಷ್ಟಾಗಿ ಇರಲಿಲ್ಲ. ಎಲ್ಲರೂ ತುಂಬಾ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದರು. ಆದರೆ ಇಂದು ಪ್ರತಿಯೊಂದು ಸೌಲಭ್ಯಗಳು ಲಭ್ಯವಿದ್ದು ಅವುಗಳನ್ನು ಬಳಸಿಕೊಂಡು ಸೋಮಾರಿಯಾಗುತ್ತಿದ್ದಾರೆ ದರಿದ್ರರಾಗುತ್ತಿದ್ದಾರೆ ಜನರು, ಆಸೆಯೆನ್ನುವುದು ಮನುಷ್ಯನಿಗೆ ಇರಬೇಕು. ಆದರೆ ಇಂದು ಮನುಷ್ಯನಿಗೆ ಆಸೆ ಅತೀ ಆಸೆಯಾಗಿದೆ. ಅವನ ಸ್ವಾರ್ಥಕ್ಕೆ ಕೊನೆಗೆ ಅವನೇ ಬಲಿಯಾಗುತ್ತಾನೆ ಎನ್ನುವುದನ್ನು ಮರೆತು ತುಂಬಾ ಅನ್ಯಾಯಗಳು ಅಕ್ರಮಗಳು, ಭ್ರಷ್ಟತೆಯನ್ನು ಮಾಡಿಕೊಂಡೇ ಬರುತ್ತಿದ್ದಾರೆ. ತಾನು ಯಾವುದೇ ಕೆಲಸ ಮಾಡದೇ ಎಲ್ಲಾ ಕೆಲಸವನ್ನು ಯಂತ್ರಗಳಿಂದ ಮಾಡಿಸುತ್ತಿದ್ದಾನೆ ಈ ಪ್ರಸ್ತುತ ಸಮಾಜದ ಮಾನವ.

ಆದ್ದರಿಂದ ಅನೇಕ ಕಾಯಿಲೆಗಳು ಬರುತ್ತಿದೆ. ಅನೇಕ ಚರ್ಮವ್ಯಾದಿಗಳು ಬರುತ್ತಿದೆ. ನೂರು ವರ್ಷದ ಮೇಲೆ ಇದ್ದ ಮನುಷ್ಯನ ಆಯಸ್ಸು ೬೦ ವರ್ಷ ಬದುಕಿದರೆ ಅದೇ ಹೆಚ್ಚು ಎನ್ನುವ ಸ್ಥಿತಿಗೆ ಬಂದು ತಲುಪಿದ್ದಾನೆ. ಮಾನವ ಬಹಳ ಬೇಗ ಎಚ್ಚೆತ್ತುಕೊಳ್ಳಬೇಕು ಇಲ್ಲದಿದ್ದರೆ ಮಾನವನ ವಿನಾಶ ಖಂಡಿತ ಎಂಬುವುದು ಕಂಬಾರರ ಆತಂಕವಾಗಿದೆ. ಪರಂಪರೆಯಿಂದಲೂ ಬೀಜ, ಭೂಮಿ ಮೊಳಕೆ ಫಲವಂತಿಕೆ ಪೋಷಣೆ ಇವು ತಾಯಿ ಕೇಂದ್ರಿತವಾಗಿ ನಡೆದಿರುವುದು ಗಮನಾರ್ಹ, ಹತ್ತಿಯಿಂದ ಬಟ್ಟೆಮಾಡಿ ಬಟ್ಟೆಯಿಂದ ಹತ್ತಿ ಮಾಡಲಾಗದ ಸಂಸ್ಕೃತಿ ಧಾನ್ಯದಿಂದ ಚಿನ್ನ ಚಿನ್ನದಿಂದ ಧಾನ್ಯ ಮಾಡಲಾಗದ ಸಂಸ್ಕೃತಿ ವಿನಾಶದತ್ತಾ ಸರಿಯುತ್ತದೆ. ಆದರೆ ತಾಯಿ ಸಂಸ್ಕೃತಿಗೆ ಮಾತ್ರ ಈ ವಿವೇಕ ಇರುವಂತಹದ್ದು, ಹೆಣ್ಣು ಹಾಗೂ ಭೂಮಿಯನ್ನು ತುಂಬಾ ಗೌರವದಿಂದ ಕಂಬಾರರು ಸ್ಥಳೀಯವಾದ ಇಂಥ ಸಶಕ್ತ ಪುನರ್ ಉತ್ಪತ್ತಿ ಕೇಂದ್ರಗಳ ಮೇಲೆ ನಡೆಯುವ ಅಕ್ರಮಗಳು ಹೀಗೆ ದೇಶಿ ನೆಲೆಗಳನ್ನು ಬಂಜರುಗೊಳಿಸುತ್ತವೆ ಎಂಬುದನ್ನು ಚರ್ಚಿಸುತ್ತಾರೆ. ಈ ಕಾದಂಬರಿಯಲ್ಲಿ ಕಂಬಾರರು ಹೆಚ್ಚಾಗಿ ನಮ್ಮ ನಾಡಿನಲ್ಲಿ ಜನಪದ ಸಂಸ್ಕೃತಿ ದೇಶಿಯ ಸಂಸ್ಕೃತಿ ಜನರಿಂದ ಮರೆಯಾಗಲು ಬಿಡಬಾರದು, ಅದು ನಮ್ಮ ನೆಲೆದ ಆಸ್ತಿ ಅದನ್ನು ನಾಶ ಮಾಡಲು ಬಿಡಬಾರದು ಎಂದು ಹೇಳಲು ಹೋರಟಿದ್ದಾರೆ ಎಂದು ಹೇಳಬಹುದು.

ಕಾಮ ವಿಶ್ವ ನಿಯಂತ್ರಕ ಎನ್ನುವ ಪಾರಂಪರಿಕ ಕಲ್ಪನೆಯನ್ನು ಮುರಿದು ಅದು ಮನುಷ್ಯನ ಖಾಸಗಿ ವಾಸ್ತವ ಎನ್ನುವ ಮೂರ್ತ ಪ್ರಜ್ಞೆಯ ನಿಲುವನ್ನು ಕಂಬಾರರಲ್ಲಿ ಕಾಣುತ್ತೇವೆ, ಇಷ್ಟ ದೈವದ ರೂಪಿಕರಣವು ದೈವದ ಶೃಂಗಾರಿಕರಣಕ್ಕೆ ದಾರಿ ಮಾಡಿತು. ಈ ಶೃಂಗಾರಕ್ಕೆ ವಿರಹ ಮೂಲ ಸ್ಥಾಯಿ. ವಿರಹದ ಭಯವಿಲ್ಲದಿದ್ದರೆ ಸಂಯೋಗಕ್ಕೆ ಸಂಭ್ರಮ ಬಾರದು. ಭಕ್ತಿ ಕಾವ್ಯದ ಮುಖ್ಯ ಬೇರು, ಈ ತಲ್ಲಣ ದೈವದ ಮಾನವೀಕರಣ ಮಾನುಷ್ಯ ಪ್ರೇಮದ ಎಲ್ಲಾ ವ್ಯವಹಾರಗಳನ್ನು ಒಳಗೊಂಡಂತದ್ದು ಎನ್ನುವ ಡಿ.ಆರ್ ನಾಗರಾಜ್ ಅವರ ಮಾತು ಇಲ್ಲಿ ಹೆಚ್ಚು ಅರ್ಥ ಪೂರ್ಣವೆನಿಸುತ್ತದೆ. ಕಂಬಾರರ ಅವಧೂತ ಪ್ರಜ್ಞೆ ಈ ಅರ್ಥದ್ದು ಎನ್ನುವುದು ಬಹುಮುಖ್ಯ ವಿಚಾರ. ಕಂಬಾರರು ಜನಪದದ ನಿರಾಕರದಲ್ಲಿ ತನ್ನ ನಾಮ ರೂಪಗಳನ್ನು ಹುಡುಕಿ ಕಟ್ಟಿಕೊಂಡ ಕವಿ. ಗ್ರಾಮ ಜೀವನದ ಜನಪದರಲ್ಲಿ ಬೇರೆತಿರುವ ಜೀವನ ಮೌಲ್ಯ ನಂಬಿಕೆ ನಡವಳಿಗಳನ್ನು ಹೆಚ್ಚು ಆಪ್ತತೆಯಿಂದ ಸ್ವಾವಿಮರ್ಶಕನ ಪ್ರಜ್ಞೆಯಿಂದ ಇದಿರುಗೊಂಡವರು. ಇದು ಕಂಬಾರರ ಬದುಕು ಬರಹದಲ್ಲೂ ಅನಾವರಣಾಗೊಳ್ಳುತ್ತದೆ. ಇದಕ್ಕೆಲ್ಲಾ ಕಂಬಾರರು ತಮ್ಮ ಬರಹಗಳಲ್ಲಿ ಬಳಸಿ ಬೆಳೆಸುವ ಭಾಷಿಕ ವಿನ್ಯಾಸಗಳು ಪ್ರೇರಕವಾದಂತವು, ಕಂಬಾರರು ಉಪಭೋಗಿಗಳಲ್ಲಾ ಉತ್ಪಾದಕರು ಹೀಗಾಗಿ ಜನಪದ ಲಯವನ್ನು ಬಳಸುವುದಿಲ್ಲ, ಪುನಃ ಸೃಷ್ಟಿಸುತ್ತಾರೆ. ಕಂಬಾರರೇ ಹೇಳುವ ಹಾಗೇ ಹಿಡಿಯಾಗಿ ಜನಪದೀಯ ಆಶಯಗಳನ್ನು ಹಾಗೆಯೇ ಬಳಸಲು ನನಗೆ ಸಾಧ್ಯವಿಲ್ಲ ಅದನ್ನು ಒಂದು ತಂತ್ರವಾಗಿ ಒಂದು ಉದ್ದೇಶಕ್ಕೆ ಬಳಸುತ್ತೇನೆ ಎನ್ನುವ ಮಾತು ಗಮನಾರ್ಹವಾಗಿದೆ. ಭಾಷೆಯ ಬಳಕೆ ಕಂಬಾರರಲ್ಲಿ ಒಂದು ರಸ ಸಿದ್ಧಿಯಂತೆ ನಡೆಯುತ್ತದೆ ಹುಡುಕಾಟ ತಿಣುಕಾಟಗಳ ಗೊಡವೆ ಅಲ್ಲಿಲ್ಲ ನಾನು ನನ್ನ ಹಿನ್ನಲೆಯಲ್ಲಿ ಪಡೆದುಕೊಂಡ ಭಾಷೆಯನ್ನು ಪುನಶ್ಚೇತನಗೊಳಿಸಿ ನನ್ನ ಸೃಜನಾತ್ಮಕತೆಗೆ ಉಪಯೋಗಿಸಿಕೊಂಡು ವರ್ತಮಾನದ ದಿಗಿಲನ್ನು ಅಭಿವ್ಯಕ್ತಗೊಳಿಸುವ ಸನ್ನಿವೇಶದಲ್ಲಿ ನನ್ನ ಸಮಕಾಲಿನರಿಗಿಲ್ಲದ ಒಂದು ಅನುಕೂಲವನ್ನು ಪಡೆದಿದೆ, ಗತಕಾಲದ ಸಮೃದ್ಧ ಭಾಷೆಯಲ್ಲಿ ಇನ್ನು ಉಳಿದಿರುವ ಚೈತನ್ಯವನ್ನು ಉದ್ದೀಪನ ಗೊಳಿಸಿಕೊಂಡು ನಾನೀಗಾಗಲೇ ಸೃಜಿಸುವ ಪುರಾಣಕ್ಕೆ ಹೊಸ ಆಯಾಮ ಕೊಡುವ ಕೆಲಸ ಮಾಡುತ್ತೇನೆ.

ಕೃಷಿ ಪ್ರಕಾರಗಳಲ್ಲಿ ಅವರು ಹದವರಿತು ದುಡಿಸಿಕೊಳ್ಳುವ ಕನ್ನಡ ಭಾಷೆಯ ಚಿತ್ರಕ ಶಕ್ತಿ ಲಾವಣಿಯ ಹಾಗೂ ಡೊಳ್ಳು ಹಾಡಿನ ಗತ್ತು ಹಾಡು ನುಡಿಯ ಸೊಗಡು ಹಾಗೂ ಗಾರುಡಿತನಗಳು ಕನ್ನಡ ಭಾಷೆಗೆ ಒಂದು ಅಗಧ ಅಭಿವ್ಯಕ್ತಿಯ ಸಾಮಾರ್ಥ್ಯವನ್ನು ಸಾಂಸ್ಕೃತಿಕ ಎಚ್ಚರವನ್ನು ತಂದುಕೊಡುತ್ತವೆ. ಕಂಬಾರರು ಜನಪದದ ಮಿಥ್‌ಗಳನ್ನು ಬಳಸಿಕೊಳ್ಳುತ್ತಾರೆ ಎನ್ನುವ ಮಾತನ್ನು ನೋಡುವುದಾದರೆ ಜೋಕುಮಾರ ಸ್ವಾಮಿಯಲ್ಲಿ ಬಳಕೆಯಾಗಿರುವ ಪಡವಲಕಾಯಿ ಏಳತೇನೆ ಕೇಳದಿಂದ ಹಿಡಿದು ಅವರ ಎಲ್ಲಾ ಬರಹಗಳಲ್ಲಿ ಕಾಣುವ ಹುಲಿ ರಾಕ್ಷದ ಗೌಡನ ಪಾತ್ರ ದೇವರು ದೆವ್ವಗಳ ಬರೀ ಪಾರಂಪರಿಕ ಅಸ್ತಿತ್ವದ ಭಾಗಗಳಾಗಿ ಬರದೇ ಕಂಬಾರರ ಕಥಾನ ಕ್ರಿಯೆಯೊಳಗಡೆ ಪುನರ್ ಸಾಂಧರ್ಬಿಕಗೊಳ್ಳುತ್ತದೆ. ಆಗ ಅವುಗಳ ಬೌದ್ದಿಕ ಹಾಗೂ ಆಂತರಿಕ ಅರ್ಥಗಳೇ ಭಿನ್ನವಾಗುತ್ತದೆ. ಶಿವನ ಡಂಗುರ ಕಾದಂಬರಿಯಲ್ಲಿ ವಿಲಾಸಿ ಮತ್ತು ಕಾಮುಕನಾದ ಬರಮೇಗೌಡನನ್ನು ನೋಡಬಹುದು, ಹಾಗೆಯೇ ಚಕೋರಿ ಕಾದಂಬರಿಯಲ್ಲಿ ಬರುವ ಮಯಾಕಾತ್ರಿ ಅಂದರೆ ಯಕ್ಷಿಯನ್ನು ಒಂದು ಕಡೆ ದೇವರೆಂದು ಚಿತ್ರಿಸಿ ಚಕೋರಿ ಕಾದಂಬರಿಯ ನಾಯಕ ಚಂದ್ರಮುತ್ತ ಇವನು ಒಬ್ಬ ಮನುಷ್ಯ ಇವನಿಂದ ಆ ಯಕ್ಷಿಗೆ ಮಾಂಗಲ್ಯವನ್ನು ಕಟ್ಟಿಸಿ ನಂತರ ಯಕ್ಷಿ ಚಂದಮುತ್ತನನ್ನು ಬಯಸಿ ಅವನನ್ನು ಪಡೆದುಕೊಳ್ಳಲು ಸ್ವರ್ಗಲೋಕಕ್ಕೆ ಕರೆದೊಯ್ಯುವುದು ಇತ್ತ ತನ್ನ ಮಗನನ್ನು ಹುಡುಕುವ ಚಂದಮುತ್ತನ ತಾಯಿ ಯಕ್ಷಿಗೆ ಅರಿಶಿಣ ಕುಂಕುಮದ ನೀರನ್ನು ಹಾಕಿ ಪೂಜಿಸುತ್ತಿದ್ದವಳು ತನ್ನ ಮಗ ತನಗೆ ಸೀಗುವಂತೆ ಮಾಡು ಎಂದು ಬೇಡಿಕೊಳ್ಳುತ್ತಿದ್ದವಳು ಕೊನೆಯಲ್ಲಿ ಬೇಸತ್ತು ಯಕ್ಷಿಯ ವಿಗ್ರಹಕ್ಕೆ ಖಾರದ ಪುಡಿಯನ್ನು ಕದರಿದ ನೀರನ್ನು ಒಯ್ಯುವ ಚಿತ್ರಣಗಳನ್ನು ನೋಡಬಹುದು. ಆಗ ಯಕ್ಷಿ ಚಂದ್ರಮುತ್ತನನ್ನು ಅವನ ತಾಯಿಯ ಹತ್ತಿರ ಕಳುಹಿಸುತ್ತಾಳೆ. ಈ ರೀತಿ ಕಂಬಾರರು ತನ್ನ ಕಾದಂಬರಿಯೊಳಗೆ ಅವಾಸ್ತವಿಕವಾದ

ಬರೀ ಕಲ್ಪನೆಯ ಕಥೆಗಳನ್ನು ತರುವುದನ್ನು ನೋಡಬಹುದು. ಕಂಬಾರರು ಅನೇಕ ಬರಹಗಳಲ್ಲಿ ಇದೇ ರೀತಿಯ ಕಲ್ಪನೆಗಳನ್ನು ತಂದಿರುವುದನ್ನು ಗಮನಿಸಿದಾಗ ಎಲ್ಲೋ ಒಂದು ಕಡೆ ಕಂಬಾರರ ಕಲ್ಪನಾ ಜಗತ್ತು ಎನ್ನುವುದು ಪ್ರಸ್ತುತಕ್ಕೆ ಎಷ್ಟರ ಮಟ್ಟಿಗೆ ಹೊಂದಿಕೊಳ್ಳುತ್ತದೆ ಮತ್ತು ಇದು ಸಾಧ್ಯವೇ? ಎನಿಸುತ್ತದೆ.

**ಪರಾಮರ್ಶನ ಕೃತಿಗಳು**

1. ಹಂಗಿಲ್ಲದ ಅಂಗಳದಲಿ – ಸಂ. ನಾರಾಯಣ್.ಕೆ., ಕ್ಯಾಸಂಬಳ್ಳಿ
2. ದಲಿತ ಸಾಹಿತ್ಯ – ಜಿ.ಎಸ್. ಭಟ್ಟ,
3. ದಲಿತ ಮಾರ್ಗ – ಡಾ॥ ಅರವಿಂದ ಮಾಲಗತ್ತಿ
4. ಬಂಡಾಯ ಸಾಹಿತ್ಯ ಡಾ॥ ಶಿವಾನಂದ ಕೆಳಗಿನಮನಿ